ಅರಕ್ಕು ಕಣಿವೆಯಿಂದ ತಂದ ಸೂರ್ಯಕಾಂತಿ ಬೀಜ, ಕಾರವಾರದಿಂದ ಬಂದ ಕಾಸ್ಮೊಸ್, ಬಿಹಾರದ ಸ್ಪಾಂಜ್ ಗೌರ್ಡ್... ಎಲ್ಲ ಹಳದಿ ಹೂ ಬಿಡುವ ಬೀಜಗಳನ್ನು ಆಯ್ದು ನೆನೆ ಹಾಕಿದಳು.

ಜೇನ್ನೊಣಗಳಿಗಾಗಿ ಟೆರೇಸ್ ಮೇಲೆ ಹಳದಿ ಹೂಬಿಡುವ ಸಸ್ಯಗಳನ್ನು ಬೆಳೆಸುವ ನೀಲನಕ್ಷೆ ಸಿದ್ಧವಾಯಿತು. ನಿನ್ನೆ ಮಾರ್ಚ್ 8ರ 'ಮಹಿಳಾ ದಿನ'ದಂದು ಇವಳದ್ದು ಬಿಟ್ಟೂ ಬಿಡದೆ ಸೀಡ್ ಟ್ರೇ ತಯಾರಿಸುವ ಕೆಲಸ. ಜೇನುಗೂಡಿನಲ್ಲಿ ಹೆಣ್ಣುನೊಣಗಳಿಗೆ ಕೆಲಸವೇ ಕೆಲಸ. ಗಂಡುಗಳು (ಅವಕ್ಕೆ ಡ್ರೋನ್ ಅಂತಾರೆ) ಬರೀ ಉಂಡಾಡಿಗಳು. ಯಾವಾಗಲೋ ಯಾವುದೋ ಒಂದು ಮೊಟ್ಟೆಯ ಮೇಲೆ ಹೆಣ್ಣು ನೊಣಗಳು ರಾಯಲ್ ಜೆಲ್ಲಿಯನ್ನು ಜಾಸ್ತಿ ಪ್ರಮಾಣದಲ್ಲಿ ಸುರಿದರೆ ಆ ಮೊಟ್ಟೆಯೇ ತುಸು ದೊಡ್ಡ ಮರಿಹುಳವಾಗಿ, ನಂತರ ರಾಜಕುಮಾರಿ ಆಗುತ್ತಾಳೆ. ಆಗ ಸ್ವಯಂವರ ಏರ್ಪಟ್ಟು ಅವಳೊಂದಿಗೆ ಹನಿಮೂನ್‌ಗೆ ಹೋಗುವುದಷ್ಟೆ ಈ ಡ್ರೋನ್‌ಗಳ ಕೆಲಸ. ಇಲ್ಲಾಂದರೆ ಈ ಉಂಡಾಡಿ ಗಂಡುಗಳಿಗೆ ಬೇರೆ ಕೆಲಸವಿಲ್ಲ. ಗಂಡು ಗೆದ್ದಲುಗಳ ಹಾಗೆ ಗೂಡಿನ ರಕ್ಷಣೆಯನ್ನೂ ಇವು ಮಾಡಲಾರವು. ಏಕೆಂದರೆ ಕಡಿಯಲು ಬೇಕಾದ ನಂಜಿನ ಮುಳ್ಳು ('ಅಂಬು') ಕೂಡ ಅವಕ್ಕಿಲ್ಲ. ದುಡಿಯುವ, ಕಡಿಯುವ ಮತ್ತು ಕಟ್ಟುವ ಕೆಲಸ ಏನಿದ್ದರೂ ಹೆಣ್ಣುಗಳದ್ದು.

ಮಾರ್ಚ್ 8ರಂದು ನಮ್ಮ ಈ ಹೆಣ್ಣುಗಳಿಗೆ ವಿಶೇಷ ಸೌಲಭ್ಯ ಕಲ್ಪಿಸುವ ಕೆಲಸ ನಮ್ಮಲ್ಲಿ ಆರಂಭವಾಯಿತು. ನನ್ನ ನಿವಾಸದ ಪಕ್ಕದ ಸೈಟ್‌ನಲ್ಲೇ ಒಂದು ಅನಧಿಕೃತ ಫ್ಯಾಕ್ಟರಿ ಇದೆ. ವಾಯುಮಾಲಿನ್ಯವನ್ನು ಕಮ್ಮಿ ಮಾಡಬಲ್ಲ ಹೊಗೆಕೊಳವೆಗಳ ಉತ್ಪಾದನೆ ಅಲ್ಲಿ ನಡೀತಿದೆ. ಆದರೆ ಭಾರೀ ಶಬ್ದಮಾಲಿನ್ಯ! ಹಗಲಿಡೀ ಮೆಟಲ್ ಕಟಿಂಗ್, ವೆಲ್ಡಿಂಗ್, ಧಾಮ್‌ಧೂಮ್ ಗದ್ದಲ. ಕ್ರೇನ್‌ಗಳ ಕುರ್ರೋ ಮುರ್ರೋ ಸದ್ದು. ಮಾಲಿನ್ಯ ನಿಯಂತ್ರಣ ಮಂಡಳಿಗೆ ಹೇಳಿ ಇವರನ್ನು ಎತ್ತಂಗಡಿ ಮಾಡಿಸಲು ಸಾಧ್ಯವಿದೆ. ಆದರೆ ಯಾರೋ ಯುವಕರು ಪಾಪ, ಒಂದು ನವೋದ್ಯಮ ಆರಂಭಿಸಿದ್ದಾರೆ, ಇರಲಿ ಎಂಬ ಮೃದು ಧೋರಣೆ ನಮ್ಮದು. ಗಟ್ಟಿ ಕುಟ್ಟಾಣ ಅವರದ್ದು. ಆದರೆ ಅವರ ಬಗ್ಗೆ ಈ ಹೆಜ್ಜೇನೂ ನಮ್ಮಂಥದ್ದೇ ಮೃದು ಧೋರಣೆ ತಳೆದೀತೆ? ಔಟು! ತೇಜಸ್ವಿಯವರ ಕರ್ವಾಲೊ ಕಾದಂಬರಿಯ ಆರಂಭದಲ್ಲೇ ಮಂದಣ್ಣ ಡೋಲು



ಬಾರಿಸಲು ಹೋಗಿ ಹೆಜ್ಜೇನುಗಳನ್ನು ಕೆಣಕಿದ ರುದ್ರಮ್ಮ ಕಥೆ ಗೊತ್ತಲ್ಲ? ಈ ಫ್ಯಾಕ್ಟರಿಯ ಢಾಂಢೂಂ ಸದ್ದು; ಅಲ್ಲಿನ ವೆಲ್ಡಿಂಗ್ ಕೆಲಸದಲ್ಲಿ ಹೊಮ್ಮುವ ಕೋಲ್ಮಿಂಚಿನ ಪ್ರಭೆಗೆ ನಮ್ಮ ಜೇನು ಇನ್ನೆಲ್ಲಿ ದಾಳಿಗೆ ಹೊರಟೀತೊ ಗೊತ್ತಿಲ್ಲ. ಅಕಸ್ಮಾತ್ ಕಾರ್ಮಿಕರು ಆಸ್ಪತ್ರೆ ಸೇರುವಂತಾದರೆ, ಆ ಅಪರಾಧಕ್ಕೆ ನಮ್ಮ ಮೇಲೆ ಎಫ್‌ಐಆರ್ ಹಾಕಬಹುದೆ? ಅಲ್ಲಿನ ಕಾರ್ಮಿಕರಿಗೆ ಹೆಜ್ಜೇನು ಬಂದಿರುವುದೂ ಗೊತ್ತಿರಲಿಕ್ಕಿಲ್ಲ. ಎಚ್ಚರಿಸೋಣವೆ? ಅದೂ ಅಪಾಯ. ನಮಗಲ್ಲ, ಹೆಜ್ಜೇನಿಗೆ ಅಪಾಯ! ಯಾವ ಹೊತ್ತಿನಲ್ಲಿ ಫ್ಯಾಕ್ಟರಿ ಕಾರ್ಮಿಕರು ಕ್ರೇನ್ ತುದಿಯಿಂದ ವಿಷ ಸಿಂಪರನೆ ಮಾಡಿಯೊ ಹೊಗೆ ಹಾಯಿಸಿಯೊ ಇವನ್ನು ಓಡಿಸಿಬಿಡಬಹುದು. ಕ್ರೇನ್ ಯಾಕೆ ಬೇಕು, ಈಗಂತೂ ವಿಷ ಸಿಂಪರಣೆಗೆ ಡ್ರೋನ್ ಬಂದಿವೆ. ಆ ಡ್ರೋನನ್ನು ಈ ಡ್ರೋನ್‌ಗಳು ಹೇಗೆ ಎದುರಿಸುತ್ತವೊ?

ಹೆಜ್ಜೇನಿನ ಗೂಡುಗಳನ್ನು ಕಂಡಲ್ಲಿ ಧ್ವಂಸ ಮಾಡುವ ಒಂದು ಅನಾಗರಿಕ ಪಡೆಯೇ ನಮ್ಮ ನಗರಗಳಲ್ಲಿ ಬೀಡು ಬಿಟ್ಟಿದೆ. ವಿಧಾನಸೌಧದ ಎತ್ತರದ